ಈ ಲೇಖನದ ವಿಷಯಾನುಕ್ರಮಣಿಕೆ


| | |
|---|---|
| **ಪುರುಷೋತ್ತಮ ಮಾಸದಲ್ಲಿ** | **2** |
| **ಮಹಾಫಲಪ್ರದವಾದ ಸತ್ಕರ್ಮಗಳು** | **2** |
| **ನಮಸ್ಕಾರಗಳು** | **2** |
| **ನಿತ್ಯಾರ್ಚನೆ** | **6** |
| **ಲಕ್ಷತುಳಸೀ ಅರ್ಚನೆ** | **7** |
| **ರಾಧಾಪುರುಷೋತ್ತಮಪೂಜಾ** | **8** |
| **ಶ್ರೀಮದ್ಭಾಗವತಶ್ರವಣ** | **12** |

# ಪುರುಷೋತ್ತಮ ಮಾಸದಲ್ಲಿ ಮಹಾಫಲಪ್ರದವಾದ ಸತ್ಕರ್ಮಗಳು

ಪುರುಷೋತ್ತಮ ಮಾಸದಲ್ಲಿ ಮಾಡಬೇಕಾದ ವ್ರತ ಮತ್ತು ದಾನಗಳ ಕುರಿತು ತಿಳಿದುಕೊಂಡೆವು.

ಈ ವ್ರತ ದಾನಗಳಿಗಿಂತಲೂ ಮಿಗಿಲಾಗಿ, ಅನಂತ ಪುಣ್ಯವನ್ನು ಕರುಣಿಸುವಂತಹ ಅತೀಸುಲಭವಾದ ಮಹಾಸತ್ಕರ್ಮಗಳ ಕುರಿತು ಇಲ್ಲಿ ತಿಳಿಯೋಣ.

## ನಮಸ್ಕಾರಗಳು

ದೇವರ ಸ್ಮರಣೆ ಮತ್ತು ದೇವರ ನಮಸ್ಕಾರಕ್ಕಿಂತ ಮಿಗಿಲಾದ ಸತ್ಕರ್ಮಗಳಿಲ್ಲ.
ಸರ್ವಸರ್ವೋತ್ತಮವಾದ ಶಾಸ್ತ್ರಾಧ್ಯಯನವೇ ಮೊದಲಾದ ಎಲ್ಲ ಸತ್ಕರ್ಮಗಳೂ ಸಹ ಫಲಪ್ರದವಾಗುವದೇ ದೇವರ ಸ್ಮರಣೆ ಮತ್ತು ನಮಸ್ಕಾರಗಳಿಂದ. ಇವಿಲ್ಲದೇ ಮಾಡುವ ಯಾವ ಸತ್ಕರ್ಮಗಳೂ ಫಲಪ್ರದವಲ್ಲ.

ಹೀಗಾಗಿ ನಿರಂತರ ಹರಿಸ್ಮರಣೆ, ಸ್ತೋತ್ರಗಳ ಪಠಣ, ವಿಷ್ಣುಸಹಸ್ರನಾಮ, ಗೀತಾ, ಭಾಗವತ ಮುಂತಾದವುಗಳ ಪಾರಾಯಣ, ಸಂಜೆಯ ಹೊತ್ತು ಭಜನೆ ಇವನ್ನು ಅವಶ್ಯವಾಗಿ ಮಾಡತಕ್ಕದ್ದು.

ಬೆಳಿಗ್ಗೆ  ಮಧ್ಯಾಹ್ನ ಸಂಜೆಗಳಲ್ಲಿ, ಇಲ್ಲವಾ ಬೆಳಿಗ್ಗೆ ಸಂಜೆ ಗಳಲ್ಲಿ ಅಥವಾ ಒಂದು ಹೊತ್ತಾದರೂ ದೇವರಿಗೆ ಕನಿಷ್ಠ 33 ಪ್ರದಕ್ಷಿಣೆ ನಮಸ್ಕಾರಗಳನ್ನು ಸಮರ್ಪಿಸಬೇಕು.

ದೇವರ ಮನೆಯಲ್ಲಿಯೇ ಪ್ರದಕ್ಷಿಣೆ ಬಂದು ನಮಸ್ಕಾರ ಮಾಡಲು ಸಾಧ್ಯವಿದ್ದರೆ ಅಲ್ಲಿಯೇ ಮಾಡಿ.

ಇಲ್ಲದಿದ್ದರೆ ಮನೆಯ ಮಧ್ಯದಲ್ಲಿ ಅಥವಾ ನಮಸ್ಕಾರ ಮಾಡಲು ಅನುಕೂಲವಾದ ಪ್ರದೇಶದಲ್ಲಿ ಮಣೆಯನ್ನಿಟ್ಟು ಅದರ ಮೇಲೆ ಆಚಾರ್ಯರ ಗ್ರಂಥಗಳನ್ನಿಟ್ಟು ಮುಂದೆರಡು ದೀಪಗಳನ್ನು ಹಚ್ಚಿ ದ್ವಾದಶ ಸ್ತೋತ್ರಾದಿಗಳನ್ನು ಪಠಿಸುತ್ತ ಪ್ರದಕ್ಷಿಣೆ ಬಂದು ಆ ಗ್ರಂಥಗಳ

ಮುಂಬದಿಯ ಬಲಭಾಗದಲ್ಲಿ ನಮಸ್ಕಾರವನ್ನು ಮಾಡಿ.

ನಮಸ್ಕಾರ ಮಾಡುವ ಕ್ರಮವನ್ನು, ನಮಸ್ಕಾರದ ಮಾಹಾತ್ಮ್ಯವನ್ನು ಮಧ್ವವಿಜಯದ "ವಾಸುದೇವನ ಏಕಾಂಗಿ ಯಾತ್ರೆ" ಎಂಬ ಉಪನ್ಯಾಸದಲ್ಲಿ ವಿವರಿಸಲಾಗಿದೆ. ಆಚಾರ್ಯರು ತಮ್ಮ ಚರ್ಯೆಯಿಂದಲೇ ನಮಗೆ ಅದ್ಭುತವಾಗಿ ಪಾಠ ಹೇಳಿರುವ ರೀತಿಯದು. ಅದನ್ನು ಕೇಳಿ ಆಚರಿಸಿ.

“ದಶಾಶ್ವಮೇಧೀ ಪುನರೇತಿ ಜನ್ಮ, ಕೃಷ್ಣಪ್ರಣಾಮೀ ನ ಪುನರ್ಭವಾಯ” ಹತ್ತು ಅಶ್ವಮೇಧಗಳನ್ನು ಮಾಡಿದರೂ ಮತ್ತೆ ಜನ್ಮವುಂಟು. ಶ್ರೀಹರಿಗೆ ಎರಗಿದವನಿಗೆ ಮರುಜನ್ಮವಿಲ್ಲ.

ನಮ್ಮೆಲ್ಲ ಸಾಧನೆಯೂ ಈ ಜನ್ಮಮರಣಗಳ ಸಂಕೋಲೆಯನ್ನು ತಪ್ಪಿಸಿಕೊಳ್ಳಲು. ಅದಕ್ಕೆ ಪ್ರಧಾನ ಸಾಧನ, ಒಡಯನ ಸ್ಮರಣೆ, ಒಡೆಯನ ಚರಣಗಳಿಗೆ ಎರಗುವದು. ಅಧಿಕಮಾಸದಲ್ಲಿ ಅದನ್ನು ಅತ್ಯಧಿಕವಾಗಿ ಮಾಡತಕ್ಕದ್ದು.

# ಪುರುಷೋತ್ತಮಮಾಸದಲ್ಲಿ ಸದಾ ಚಿಂತಿಸಬೇಕಾದ ರೂಪ

## ಗೋಲೋಕಾಧಿಪತಿ, ಗೋಪೀಕಾವಲ್ಲಭ ರಾಧಾನಾಮಕಲಕ್ಷ್ಮೀಪತಿ ಪುರುಷೋತ್ತಮ



ವಿಶ್ವನಂದಿನಿಯ ಆತ್ಮೀಯಬಾಂಧವ, ನಮ್ಮ ರಜತ್ ರವರು ಉಪನ್ಯಾಸವನ್ನು ಕೇಳಿ ಎಲ್ಲ ಭಕ್ತರಿಗೆ ಅನುಕೂಲವಾಗಲಿ ಎಂದು ಶ್ರದ್ಧೆಯಿಂದ ಈ ಚಿತ್ರ ರಚಿಸಿದ್ದಾರೆ. ಶ್ರೀಮದಾಚಾರ್ಯರ ಕರುಣೆ ಸದಾ ಅವರ ಮತ್ತು ಅವರ ಕುಟುಂಬದ ಎಲ್ಲರ ಮೇಲಿರಲಿ ಎಂದು ಹರಿಗುರುಗಳಲ್ಲಿ ಪ್ರಾರ್ಥಿಸುತ್ತೇನೆ.

## ನಿತ್ಯಾರ್ಚನೆ

ಪರಮಾತ್ಮನನ್ನು ಪ್ರತಿನಿತ್ಯ ಷೋಡಶೋಪಚಾರಗಳಿಂದ ಪೂಜೆ ಮಾಡುವದು. ಸಾಲಿಗ್ರಾಮ ಪ್ರತಿಮೆಗಳಲ್ಲಿ ಸನ್ನಿಹಿತನಾದ ಭಗವಂತನ ಪೂಜೆಯನ್ನು ಮಾಡುವದು ಜೀವನದ ಸೌಭಾಗ್ಯ. ಅಂಥಾದ್ದರಲ್ಲಿ, ಶ್ರೀಹರಿಗೆ ಅತ್ಯಂತ ಪ್ರಿಯವಾದ ಪುರುಷೋತ್ತಮಮಾಸದಲ್ಲಿ ಮಾಡಿದಾಗ ಮಹತ್ತರವಾದ ಪುಣ್ಯ ನಮ್ಮದಾಗುತ್ತದೆ. ಶಾಸ್ತ್ರಗ್ರಂಥಗಳ ಪಠಣ ಪಾರಾಯಣಗಳಿಗಿಂತಲೂ ಮಿಗಿಲಾದ ಪುಣ್ಯ ಭಗವದರ್ಚನೆಯಿಂದ ಲಭಿಸುತ್ತದೆ ಎಂದು ಶ್ರೀಮದಾಚಾರ್ಯರು ತಂತ್ರಸಾರಸಂಗ್ರಹದಲ್ಲಿ ಹೇಳುತ್ತಾರೆ. ಆ ಮಾತನ್ನು ನಾರಾಯಣಪಂಡಿತಾಚಾರ್ಯರು ಯೋಗದೀಪಿಕೆಯಲ್ಲಿ ಪ್ರತಿಪಾದಿಸಿ ಸಮರ್ಥಿಸುತ್ತಾರೆ.

## ಲಕ್ಷತುಳಸೀ ಅರ್ಚನೆ

**“ಶಾಲಗ್ರಾಮಾರ್ಚನಂ ಕಾರ್ಯಂ
ಮಾಸೇ ಶ್ರೀಪುರುಷೋತ್ತಮೇ ।
ತುಲಸೀದಲಲಕ್ಷೇಣ
ತಸ್ಯ ಪುಣ್ಯಮನಂತಕಮ್ ”**

ಅಧಿಕಮಾಸದಲ್ಲಿ ಲಕ್ಷತುಳಸಿಗಳಿಂದ ಪರಮಾತ್ಮನನ್ನು ಅರ್ಚಿಸಬೇಕು. ಪ್ರತಿನಿತ್ಯ ಮೂರುಸಾವಿರ ನಾಮಗಳಿಂದ (ಮೂರು ಬಾರಿ ವಿಷ್ಣುಸಹಸ್ರನಾಮವನ್ನು ಜಪಿಸುತ್ತಾ) ಪರಮಾತ್ಮನನ್ನು, ಏಕಾದಶಿಯ ದಿವಸಗಳಲ್ಲಿ ಎಂಟೆಂಟು ಬಾರಿ ಸಹಸ್ರನಾಮಗಳಿಂದ ಅರ್ಚಿಸಿದರೆ ಒಂದು ತಿಂಗಳಿಗೆ ಲಕ್ಷತುಳಸಿಯನ್ನು ಸಮರ್ಪಿಸಿದಂತಾಗುತ್ತದೆ. ಪರಮಾತ್ಮನಿಗೆ ಅತ್ಯಂತ ಪ್ರಿಯವಾದ ಮಾಸ, ಅತ್ಯಂತ ಪ್ರಿಯವಾದ ತುಳಸಿ, ಮಹಾಭಾರತದ ಸರ್ವಸರ್ವೋತ್ತಮಭಾಗವಾದ ವಿಷ್ಣುಸಹಸ್ರನಾಮ, ಸಾಲಿಗ್ರಾಮ, ಇವೆಲ್ಲದರ ಸಂಯೋಗವಿದ್ದರೆ ಉಂಟಾಗುವ ಪುಣ್ಯವನ್ನು ಲೆಕ್ಕಕ್ಕಿಡಲಾದೀತೇ ? **“ಪುಣ್ಯಮನಂತಕಮ್”**

## ರಾಧಾಪುರುಷೋತ್ತಮಪೂಜಾ

ಪುರುಷೋತ್ತಮಮಾಸದ ಅಭಿಮಾನಿದೇವತೆಯಾದ ಪುರುಷೋತ್ತಮ ಅನುಗ್ರಹವನ್ನು ಪಡೆದದ್ದು ಗೋಲೋಕದಲ್ಲಿರುವ ಪರಮಾತ್ಮನ ಪುರುಷೋತ್ತಮರೂಪದಿಂದ. ಆ ಭಗವಂತ ತನ್ನ ಹೆಸರನ್ನೇ, ನಾಮರಹಿತನಾದ ಈ ದೇವತೆಗೆ ನೀಡುತ್ತಾನೆ. ಪರಮಾತ್ಮನ ಆ ಪುರುಷೋತ್ತಮ ರೂಪದ ಜತೆಯಲ್ಲಿರುವ ಲಕ್ಷ್ಮೀದೇವಿಯ ರೂಪಕ್ಕೆ ರಾಧಾ ಎಂದು ಹೆಸರು. ಶ್ರೀಕೃಷ್ಣನಾಗಿ ಅವತರಿಸಿದಾಗ "ರಾಧಾ" ಎನ್ನುವ ಹೆಸರಿನ ಗೋಪಿಕೆಯನ್ನು ಯಾವ ಪ್ರಮಾಣಗ್ರಂಥಗಳೂ ಉದಾಹರಿಸಿಲ್ಲ. ಅವತಾರದಲ್ಲಿ ರಾಧೆಯ ಕಥೆ ಕಾಲ್ಪನಿಕವಾದದ್ದು. ಆದರೆ, ಗೋಲೋಕದಲ್ಲಿ ಲಕ್ಷ್ಮೀದೇವಿಯೇ ರಾಧಾ ಎನ್ನುವ ರೂಪವನ್ನು ಧರಿಸಿ ಪರಮಾತ್ಮನನ್ನು ಸೇವಿಸುತ್ತಾಳೆ ಎಂದು ಬೃಹನ್ನಾರದೀಯಪುರಾಣ ತಿಳಿಸುತ್ತದೆ. ಪರಮಾತ್ಮನನ್ನು ನಿರಂತರ ಆರಾಸುತ್ತಾಳೆ, ಸ್ವಯಂ ಸಮಸ್ತ ಗೋಪಿಕಾವೃಂದದಿಂದ ಆರಾತಳಾಗಿದ್ದಾಳೆ ಮತ್ತು

ಪರಿಪೂರ್ಣವಾದ ಸಿದ್ಧಿಯನ್ನು ಅರ್ಥಾತ್ ಮುಕ್ತಿಯನ್ನು ಸದಾಕಾಲದಲ್ಲಿಯೂ ಪಡೆದಿದ್ದಾಳೆ, ನಿತ್ಯಮುಕ್ತಳಾಗಿದ್ದಾಳೆ ಎನ್ನುವ ಕಾರಣಕ್ಕೆ ಲಕ್ಷ್ಮೀದೇವಿಯನ್ನು ರಾಧಾ ಎನ್ನುತ್ತಾರೆ.

ಪುರುಷೋತ್ತಮಮಾಸದಲ್ಲಿ ರಾಧಾ ಪುರುಷೋತ್ತಮರ ಪೂಜೆಯನ್ನು ಮಾಡಬೇಕು. ಪೂಜಾವಿಧಾನವನ್ನು ಬೃಹನ್ನಾರದೀಯಪುರಾಣವೇ ತಿಳಿಸುತ್ತದೆ. ವಿದ್ವಾಂಸರಿಂದ ಅದನ್ನು ತಿಳಿದುಕೊಂಡು, ಶ್ರೇಷ್ಠ ಬ್ರಾಹ್ಮಣರನ್ನು ಪುರೋಹಿತರನ್ನಾಗಿ ಪಡೆದು ಈ ವ್ರತವನ್ನು ಆಚರಿಸಬೇಕು. ಒಂದು ತಿಂಗಳ ವ್ರತ. ಕೃಷ್ಣಪಕ್ಷದ ಅಷ್ಟಮೀ, ನವಮೀ, ಚತುರ್ದಶಿ ಅಥವಾ ಅಮಾವಾಸ್ಯೆಯಂದು ಇದರ ಉದ್ಯಾಪನೆಯನ್ನು ಮಾಡಬೇಕು.

ಉದ್ಯಾಪನೆಯ ದಿವಸ ವ್ರತಸಂಪೂರ್ತಿಗಾಗಿ ಗೋದಾನವನ್ನು ಮಾಡಬೇಕು.

> **“ಧೇನುರೇಕಾ ಪ್ರದಾತವ್ಯಾ**
> **ಸುಶೀಲಾ ಚ ಪಯಸ್ವಿನೀ ।**

**ಸಚ್ಚೈಲಾ ಚ ಸವತ್ಸಾ ಚ**
**ಘಂಟಾಭರಣಭೂಷಿತಾ ।**
**ತಾಮ್ರಪೃಷ್ಠೀ ಹೇಮಶೃಂಗೀ**
**ಸರೌಪ್ಯಖುರಭೂಷಿತಾ”**

ಈ ಪುರುಷೋತ್ತಮವ್ರತವನ್ನು ಮಹಾಪ್ರಯತ್ನಪೂರ್ವಕವಾಗಿ ಅನುಷ್ಠಾನ ಮಾಡಲೇಬೇಕು, ಕಾರಣ ಅದರಿಂದ ಬರುವ ಪುಣ್ಯ ಅತ್ಯಕವಾದದ್ದು ಎಂದು ಶಾಸ್ತ್ರ ಹೇಳುತ್ತದೆ.

**“ಯೇನ ಕೇನಾಪ್ಯುಪಾಯೇನ**
**ವ್ರತಮೇತತ್ ಸಮಾಚರೇತ್ ।**
**ಕುರ್ಯಾಚ್ಚ ಪರಯಾ ಭಕ್ತ್ಯಾ**
**ದಾನಂ ವಿತ್ತಾನುಸಾರತಃ”**

ದಾನ ಇದು ಧನಸಾಪೇಕ್ಷವಾದದ್ದು. ಹಣವಿದ್ದರೆ ಮಾಡಲಾಗುತ್ತದೆ, ಇಲ್ಲದಿದ್ದರೆ ಇಲ್ಲ. ಆದರೆ, ಪೂಜೆಗೇನು ಬೇಕು ? ಒಂದು ಕೊಡ ನೀರು. ಒಂದು ಬೊಗಸೆ ತುಳಸಿ. ಪೂರ್ಣವಾದ ಶ್ರದ್ಧೆ. ನಿರ್ಮಲವಾದ ಭಕ್ತಿ. ಮೊದಲ ಎರಡು ದುರ್ಲಭವಲ್ಲ. ಕಡೆಯ ಎರಡು ಇಲ್ಲದಿದ್ದರೆ

ವೈಷ್ಣವನೇ ಅಲ್ಲ. ಹೀಗಾಗಿ ವೈಷ್ಣವನಾದವನು ಅವಶ್ಯವಾಗಿ ರಾಧಾಪುರುಷೋತ್ತಮರ ಪೂಜಾವ್ರತವನ್ನು ಮಾಡಬೇಕು ಎಂದು ಶಾಸ್ತ್ರ ಆದೇಶಿಸುತ್ತದೆ.

## ಶ್ರೀಮದ್ಭಾಗವತಶ್ರವಣ

ಪುರುಷೋತ್ತಮಮಾಸದ ಕಾಲ ಮೋಕ್ಷದಾಯಕವಾದ ಕಾಲ. ಹೀಗಾಗಿ ಮೋಕ್ಷಪ್ರದವಾದ ಭಾಗವತದ ಶ್ರವಣ ಅನಂತಪುಣ್ಯಪ್ರದಾಯಕ.

**“ಶ್ರೀಮದ್ ಭಾಗವತಂ ಭಕ್ತ್ಯಾ**
**ಶ್ರೋತವ್ಯಂ ಪುರುಷೋತ್ತಮೇ ।**
**ತತ್ಪುಣ್ಯಂ ವಚಸಾ ವಕ್ತುಂ**
**ವಿಧಾತಾಽಪಿ ನ ಶಕ್ನುಯಾತ್”**

ನಿಷ್ಠಾವಂತನಾದ ಸಾಧಕನಿಗೆ, ಬದುಕಿನ ಬೆಲೆಯನ್ನು, ಅದರಲ್ಲಿಯೂ ಮಾಧ್ವಜನ್ಮದ ಬೆಲೆಯನ್ನು ಅರ್ಥ ಮಾಡಿಕೊಂಡ ಮನುಷ್ಯನಿಗೆ ಭಾಗವತಶ್ರವಣದ, ಸಚ್ಛಾಸ್ತ್ರಗಳ ಶ್ರವಣದ ಬೆಲೆಯನ್ನು ತಿಳಿಸಿ ಹೇಳಬೇಕಾಗಿಲ್ಲ.

ಉಳಿದ ಯಾವುದನ್ನು ಮಾಡದಿದ್ದರೂ ಭಾಗವತಶ್ರವಣವನ್ನಂತೂ ಮಾಡಲೇಬೇಕು. ಉಳಿದ ಎಲ್ಲವನ್ನು ಮಾಡಿದರೂ ಭಾಗವತಶ್ರವಣವನ್ನು ಸರ್ವಥಾ ಬಿಡಬಾರದು.

ಭಾಗವತ ಜ್ಞಾನ ಭಕ್ತಿ ವೈರಾಗ್ಯಪ್ರದವಾದದ್ದು. ಪುರುಷೋತ್ತಮಮಾಸವೂ ಅದನ್ನೇ ನೀಡುವಂತದ್ದು. ಆ ಪರ್ವಕಾಲದಲ್ಲಿ ಆ ಪುಣ್ಯಗ್ರಂಥವನ್ನು ಶ್ರವಣ ಮಾಡುವದರಿಂದ ಶ್ರೀಹರಿ ಸುಪ್ರೀತನಾಗುತ್ತಾನೆ. ತನ್ನನ್ನು ಹೃದಯಕಮಲದಲ್ಲಿ ತೋರುತ್ತಾನೆ.

ಆ ಶ್ರೀಹರಿಯ ಕಾರುಣ್ಯ ವಿಶ್ವನಂದಿನಿಯ ಎಲ್ಲ ಬಾಂಧವರ ಮೇಲಾಗಲಿ, ಪರಿಪೂರ್ಣ ಶ್ರದ್ಧಾ ಭಕ್ತಿಗಳಿಂದ ನಿಮ್ಮಿಂದ ಪುರುಷೋತ್ತಮ ಮಾಸದ ಧರ್ಮಾನುಷ್ಠಾನಗಳು ನಡೆಯಲಿ ಎಂಬ ಹಾರೈಕೆಯೊಂದಿಗೆ

— ವಿಷ್ಣುದಾಸ ನಾಗೇಂದ್ರಾಚಾರ್ಯ

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **NEW IFSC** **SBIN0040076**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**
No. 2, "Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India
nagendracharya@yahoo.co.in
WhatsApp: 9901 551 491